# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 433
ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 10.07.2023
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಸಮಗ್ರ ಶಿಕ್ಷಣ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ ಮತ್ತು ಈ ಯೋಜನೆಯ ಧ್ಯೇಯೋದ್ದೇಶಗಳು ಯಾವುವು; | ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಸಮಗ್ರ ಶಿಕ್ಷಣ ಯೋಜನೆಯನ್ನು 2018-19ನೇ ಸಾಲಿನಿಂದ ಪ್ರಾರಂಭಿಸಲಾಯಿತು.<br><br>**ಸಮಗ್ರ ಶಿಕ್ಷಣ ಯೋಜನೆಯ ಧ್ಯೇಯೋದ್ದೇಶಗಳು:**<br>• RTE 2009ರ ಕಾಯ್ದೆಯನ್ನು ಸಮರ್ಪಕವಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸುವುದು.<br>• ಶಾಲಾ ಪೂರ್ವ ಶಿಕ್ಷಣಕ್ಕೆ (ECCE) ಕೇಂದ್ರೀಕರಿಸುವುದು, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಬಗ್ಗೆ ಒತ್ತು ನೀಡುವುದು.<br>• ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಹಾಗೂ ಕಲಿಕಾ ಫಲಶೃತಿಗಳನ್ನು ಅಭಿವೃದ್ಧಿಗೊಳಿಸುವುದು.<br>• ಶಾಲಾ ಶಿಕ್ಷಣದಲ್ಲಿ ಸಾಮಾಜಿಕ ಮತ್ತು ಲಿಂಗ ಅಂತರಗಳನ್ನು ನಿವಾರಿಸುವುದು.<br>• ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಮಾನತೆ ಮತ್ತು ಭಾಗವಹಿಸುವಿಕೆಯನ್ನು ಖಚಿತಪಡಿಸುವುದು.<br>• ವೃತ್ತಿಪರ ಶಿಕ್ಷಣಕ್ಕೆ ಉತ್ತೇಜನ ನೀಡುವುದು.<br>• ಸುರಕ್ಷತೆ ಮತ್ತು ಸಂತಸದಾಯಕ ಕಲಿಕಾ ವಾತಾವರಣವನ್ನು ಶಾಲೆಗಳಲ್ಲಿ ಒದಗಿಸುವುದು. |
| (ಆ) | ರಾಜ್ಯದಲ್ಲಿ ಕೇಂದ್ರ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದ ನಂತರ ಸಮಗ್ರ ಶಿಕ್ಷಣ ಯೋಜನೆ ಅನುಷ್ಠಾನದಲ್ಲಿ ತಂದಿರುವ ಬದಲಾವಣೆಗಳು ಯಾವುವು ಮತ್ತು ಅನುಷ್ಠಾನದ ಜವಾಬ್ದಾರಿ ಮತ್ತು ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿರುವ ಸಂಸ್ಥೆಗಳು ಯಾವುವು; (ಪೂರ್ಣ ವಿವರ ನೀಡುವುದು) | • ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ನೀಡಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕಾಲಸೂಚಿಯಂತೆ ಅನುಷ್ಠಾನ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರ ಹಾಗೂ ಇಲಾಖೆಯು ಕಾರ್ಯ ಪ್ರವೃತ್ತವಾಗಿವೆ.<br>• ಕರ್ನಾಟಕದ ಪ್ರಸ್ತುತ ಶಾಲಾ ಶಿಕ್ಷಣದ ಶೈಕ್ಷಣಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಮತ್ತು ಗಮನಹರಿಸಬೇಕಾದ ಪ್ರಮುಖ ಕ್ಷೇತ್ರಗಳನ್ನು ಗುರ್ತಿಸಿ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಾಷ್ಟ್ರೀಯ ಶಿಕ್ಷಣ ನೀತಿ 2020ರ ಸಂಬಂಧ ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, ಇವರು ನೀಡಿರುವ Task points SARTHA Q (ಸಾರ್ಥಕ್) ಇದನ್ನು 2020 ರಿಂದ 2030ರವರೆಗಿನ ಕಾಲಸೂಚಿಯಲ್ಲಿ ಅನುಷ್ಠಾನ ಮಾಡಲು ರಾಜ್ಯ ಸರ್ಕಾರ ಹಾಗೂ ಇಲಾಖೆಯು ಕ್ರಮಕೈಗೊಂಡಿದೆ. |

ರಾಷ್ಟ್ರೀಯ ಶಿಕ್ಷಣ ನೀತಿಯ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ ಅನುಷ್ಠಾನ ಕಾರ್ಯಪಡೆ ಮತ್ತು ಅದರಡಿಯಲ್ಲಿ ವಿವಿಧ ಕಾರ್ಯಗಳಿಗೆ ಉಪಸಮಿತಿಗಳನ್ನು ರಚನೆ ಮಾಡಲಾಗಿದ್ದು, ಅವರ ಶಿಫಾರಸ್ಸಿನಂತೆ ಹಂತ ಹಂತವಾಗಿ ರಾಜ್ಯದಲ್ಲಿ ಜಾರಿಗೆ ತರುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನುಷ್ಠಾನ ಕಾರ್ಯಪಡೆಯು ಶಾಲಾ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಪಠ್ಯಕ್ರಮ ವಿನ್ಯಾಸದಲ್ಲಿ ಹಾಗೂ ಕಲಿಕಾ ಬೋಧನಾ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಬದಲಾವಣೆಗಳನ್ನು ಶಿಫಾರಸ್ಸು ಮಾಡಲಾಗಿದೆ. ಸದರಿ ಶಿಫಾರಸ್ಸುಗಳಂತೆ ಇಲಾಖೆಯು ಕಾರ್ಯಪ್ರವೃತ್ತವಾಗಿ ಎನ್.ಇ.ಪಿ 2020ರ ಅನುಷ್ಠಾನ ಕಾರ್ಯಪಡೆ ಸೂಚಿಸಿದಂತೆ ಪಠ್ಯಕ್ರಮ ಸಿದ್ಧಪಡಿಸಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

1. ಪೊಸಿಷನ್ ಪೇಪರ್‌ರಚನೆ

2. ಪಠ್ಯ ಕ್ರಮ ರಚನೆಗಾಗಿ ರಾಜ್ಯ ಫೋಕಸ್ ತಂಡಗಳ ರಚನೆ.

3. ಪೂರ್ವ ಬಾಲ್ಯಾವಸ್ಥೆಗಾಗಿ ಪಠ್ಯಕ್ರಮ ರಚನಾ ತಂಡಗಳು.

4. ಪಠ್ಯಕ್ರಮರಚನಾ ತಂಡಗಳ ಮೂಲಕ ಎನ್.ಸಿ.ಎಫ್ ಶಿಫಾರಸ್ಸುಗಳ ಆಧಾರದ ಮೇಲೆ ಪಠ್ಯಕ್ರಮ ರಚನಾ ಕಾರ್ಯವನ್ನು ಕೈಗೊಳ್ಳಲು ಯೋಜಿಸಿದೆ.

- ಈ ನೀತಿಯು ಹೊಸ ಬೋಧನಾ ವಿಧಾನ ಮತ್ತು ಪಠ್ಯಕ್ರಮದ ಪುನರ್ರಚನೆಯನ್ನು 5 + 3 + 3 + 4 ರ ವಿಧಾನದಲ್ಲಿ ಮಾಡಲಾಗುವುದು.

ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ 3 ವರ್ಷದ ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ತರಗತಿಗಳು 1 ಮತ್ತು 2 ಬುನಾದಿ ಹಂತ; ತರಗತಿಗಳು 3 ರಿಂದ 5 ಸಿದ್ಧತಾ ಹಂತ; 6 ರಿಂದ 8 ಮಾಧ್ಯಮಿಕ ಹಂತ; 9 ರಿಂದ 12 ಪ್ರೌಢ ಹಂತ ಎಂದು ಗುರುತಿಸಲಾಗಿದೆ.

ಹೊಸ 5 + 3 + 3 + 4 ರಚನೆಯಲ್ಲಿ, 3ನೇ ವಯಸ್ಸಿನಿಂದ ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣದ ಸುಭದ್ರ ತಳಹದಿಯೂ (ECCE) ಸಹ ಸೇರಿದ್ದು, ಇದು ಮಕ್ಕಳಲ್ಲಿ ಒಟ್ಟಾರೆ ಉತ್ತಮ ಕಲಿಕೆ, ಅಭಿವೃದ್ಧಿ ಮತ್ತು ಯೋಗ ಕ್ಷೇಮವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಇ.ಸಿ.ಸಿ.ಇ ಹಂತಕ್ಕೆ 6 ಉಪಸಮಿತಿಗಳನ್ನು ರಚಿಸಿ ಪಠ್ಯಕ್ರಮ ವಿನ್ಯಾಸ, ಪಠ್ಯಕ್ರಮ+ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು+ಮೌಲ್ಯಮಾಪನ, ಸಾಮರ್ಥ್ಯ ಅಭಿವೃದ್ಧಿ, ಸಮುದಾಯ ತಲುಪುವಿಕೆ, ಮಗುವಿನ ಆರಂಭಿಕ ಉತ್ತೇಜನ ಮತ್ತು ಮೇಲ್ವಿಚಾರಣೆ ಮತ್ತು ಉಸ್ತುವಾರಿ ಕ್ಷೇತ್ರಗಳಿಗೆ ಸಂಬಂಧಪಟ್ಟ ಮಾಡ್ಯೂಲ್/ವರದಿಗಳನ್ನು ಸಿದ್ಧಪಡಿಸಲಾಗುತ್ತಿದೆ.
- ಎಲ್ಲಾ ಶಾಲೆಗಳ ವಿದ್ಯಾರ್ಥಿಗಳಿಗೂ ಅನ್ವಯವಾಗುವಂತೆ ವಿಶೇಷ ಮೌಲ್ಯಾಂಕನ ವಿಧಾನವನ್ನು, ಶಿಕ್ಷಕರ ತರಬೇತಿ ಹಾಗೂ ತರಬೇತಿ ಸಾಹಿತ್ಯವನ್ನು ಪುನರ್ ರಚಿಸಲಾಗುತ್ತಿದೆ. ಹೀಗಾಗಿ ಸರ್ಕಾರಿ, ಅನುದಾನಿತ, ಅನುದಾನರಹಿತ ಎಂದು ಶಾಲೆಗಳನ್ನು ಪ್ರತ್ಯೇಕಿಸಿರುವುದಿಲ್ಲ.
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಬಿಡುಗಡೆಯಾದ ನಂತರ ಬುನಾದಿ ಹಂತಕ್ಕೆ ಸಂಬಂಧಿಸಿದಂತೆ ರಾಜ್ಯ ಪಠ್ಯಕ್ರಮ ಚೌಕಟ್ಟನ್ನು ಸಿದ್ಧಪಡಿಸಲಾಗಿದೆ.
- ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢ ಹಂತಗಳಿಗೆ ಸ್ಟೀರಿಂಗ್

| | | |
|---|---|---|
| | | ಕಮಿಟಿಗಳನ್ನು ರಚಿಸಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br>• ಸಮಪರ್ಕವಾದ ತರಗತಿ ಬೋಧನೆಯನ್ನು ನಿರ್ವಹಿಸಲು ನಿಷ್ಠಾ 0.1, 0.2 ಮತ್ತು 0.3 ಆನ್‌ಲೈನ್ ತರಬೇತಿಗಳನ್ನು ಶಿಕ್ಷಕರಿಗೆ ನೀಡಲಾಗುತ್ತಿದೆ.<br>• ಪ್ರಸ್ತುತ ಪೂರ್ವ ಬಾಲ್ಯಾವಸ್ಥೆ ಪೋಷಣೆ ಮತ್ತು ಶಿಕ್ಷಣ(ECCE) ಅಂದರೆ 3 ರಿಂದ 6 ವಯಸ್ಸಿನ ಮಕ್ಕಳ ಪೋಷಣೆ ಮತ್ತು ಶಿಕ್ಷಣವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಕಾರದೊಂದಿಗೆ ಸಮಿತಿ ರಚನೆಯಾಗಿದ್ದು, ಆ ವಯಸ್ಸಿನ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ ರಚನೆ ಹಾಗೂ ಶಿಕ್ಷಕರ ತರಬೇತಿ ಕೈಪಿಡಿ ರಚಿಸಲಾಗುತ್ತಿದೆ.<br>• ಬುನಾದಿ ಹಂತದ ಕಲಿಕೆಯನ್ನು ಉತ್ತಮ ಪಡಿಸಲು ನಿಪುಣ್ ಭಾರತ್ ಮಿಷನ್‌ನ್ನು ಜಾರಿಗೊಳಿಸಲಾಗಿದೆ. ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಶಾಸ್ತ್ರ (FLN) ಸಂಬಂಧಿಸಿದಂತೆ ಕೋರ್ ಸಮಿತಿ ರಚನೆಯಾಗಿದ್ದು, ಪಠ್ಯಕ್ರಮ ರಚನೆಗೆ ಸಂಬಂಧಿಸಿದಂತೆ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. 2022-23ನೇ ವರ್ಷವನ್ನು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ ವರ್ಷವೆಂದು ಪರಿಗಣಿಸಲಾಗಿರುತ್ತದೆ.<br>ಶಿಕ್ಷಣ ವಂಚಿತ ಮಕ್ಕಳಿರುವ ಪ್ರದೇಶಗಳನ್ನು ಗುರುತಿಸಿ ಆ ಭಾಗದ ಮಕ್ಕಳಿಗೆ ಹೆಚ್ಚು ಅವಕಾಶಗಳನ್ನು ನೀಡುವ ನಿಟ್ಟಿನಲ್ಲಿ SEZ (Special Education Zone) ಗಳನ್ನು ಸ್ಥಾಪನೆ ಮಾಡುವ ಕಾರ್ಯವನ್ನು ಸರ್ಕಾರವು ಕೈಗೊಂಡಿದೆ. |
| (ಇ) | ರಾಜ್ಯ ಸರ್ಕಾರಕ್ಕೆ ಸಮಗ್ರ ಶಿಕ್ಷಣ ಯೋಜನೆಯಲ್ಲಿ ಅಡಗಿರುವ ವಿವಿಧ ಘಟಕಗಳಿಗೆ ಕೇಂದ್ರ ಸರ್ಕಾರದಿಂದ ವಿವಿಧ ರೀತಿಯ ನೆರವು ಎಷ್ಟು ಮತ್ತು ಈ ನೆರವು ಹೇಗೆ ಬಳಸಿಕೊಳ್ಳಲಾಗಿದೆ; (ಪೂರ್ಣ ವಿವರ ನೀಡುವುದು) | 2022-23ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯ ಅನುಮೋದಿತ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಕೆಳಕಂಡ ವಿವರಗಳಂತೆ ಅನುದಾನ ಬಿಡುಗಡೆಯಾಗಿರುತ್ತದೆ.<br>ರೂ ಲಕ್ಷಗಳಲ್ಲಿ<br>(see table below) |

| Sl No | Head | Recurring | Non Recurring | Total |
|---|---|---|---|---|
| 1 | Elementary Education | 64639.04 | 8931.45 | 73570.49 |
| 2 | Secondary Education | 4910.66 | 5656.02 | 10566.68 |
| 3 | Teacher Education | 2012.88 | 2.43 | 2015.31 |
| | TOTAL | **71562.58** | **14589.90** | **86152.48** |

ಮೇಲ್ಕಂಡ ಕೋಷ್ಟಕದಲ್ಲಿರುವ ವಿವರಗಳಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು (ನೆರವು) 2022-23ನೇ ಸಾಲಿನ ಪಿಎಬಿ (ಯೋಜನಾ ಅನುಮೋಧನಾ ಮಂಡಳಿ) ಅನುಮೋದಿತ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ.

2023-24ನೇ ಸಾಲಿನ ಕೇಂದ್ರದ ಪಾಲಿನ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಿದ್ದು ಅನುದಾನ ಬಿಡುಗಡೆ ನಿರೀಕ್ಷೆಯಲ್ಲಿದೆ.

| | | |
|---|---|---|
| (ಈ) | ರಾಜ್ಯದಲ್ಲಿ ಈ ಯೋಜನೆ ಅಡಿ ಕೋವಿಡ್ ನಂತರ ಶಾಲೆಯಿಂದ ಹೊರ ಉಳಿದ ಶಾಲಾ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರ ಹಮ್ಮಿಕೊಂಡಿರುವ | ಕೋವಿಡ್ ನಂತರ ಪೂರ್ಣಪ್ರಮಾಣದಲ್ಲಿ ಶಾಲೆಗಳು ಪ್ರಾರಂಭವಾದಾಗ, ಈ ಮಕ್ಕಳನ್ನು ಶಾಲೆಗೆ ಕರೆತರಲು ಸರ್ಕಾರ ನಿರ್ದಿಷ್ಟವಾದ ಯೋಜನೆಯನ್ನು ರೂಪಿಸಿದ್ದು, ರಾಜ್ಯದಲ್ಲಿ ವಲಸೆ ಮಕ್ಕಳನ್ನು ಪತ್ತೆ ಹಚ್ಚಿ ಶಿಕ್ಷಣ ಮುಖ್ಯವಾಹಿನಿಗೆ ತರಲು ಸರ್ಕಾರದ ಆದೇಶ ಸಂಖ್ಯೆ: ಇಡಿ 05 ಮಾಹಿತಿ 2019, ಬೆಂಗಳೂರು, ದಿನಾಂಕ: 09.12.2019ರ **"ವಲಸಿಗ ಮಕ್ಕಳ ಹಾಗೂ** |

| | | |
|---|---|---|
| | ಕಾರ್ಯಕ್ರಮಗಳು ಯಾವುವು ಮತ್ತು ಈ ಕಾರ್ಯಕ್ರಮಗಳಿಂದ ಸಾಧಿಸಿರುವ ಪ್ರಗತಿಯ ಪೂರ್ಣ ವಿವರ ನೀಡುವುದು | **ವಲಸಿಗ ಕೂಲೀಕಾರರ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯ ನೀತಿ–2019" ಅನ್ನು ಅನುಷ್ಠಾನಗೊಳಿಸಿದೆ.** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಕಂದಾಯ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಭಾಗಿತ್ವದೊಂದಿಗೆ ವಲಸೆ ಮಕ್ಕಳನ್ನು ಪತ್ತೆ ಹಚ್ಚಿ ಶಿಕ್ಷಣ ಮುಖ್ಯವಾಹಿನಿಗೆ ತರಲು ಕಾರ್ಯತಂತ್ರಗಳನ್ನು ರೂಪಿಸಲಾಗಿದೆ.<br>ವಲಸೆ ಮಕ್ಕಳನ್ನು ಶಿಕ್ಷಣ ಮುಖ್ಯವಾಹಿನಿಗೆ ತರಲು, ದುರ್ಬಲ, ಅವಕಾಶ ವಂಚಿತ ಮಕ್ಕಳಿಗೆ ಹಾಗೂ ವಲಸಿತ ಮಕ್ಕಳಿಗೆ ನೇತಾಜಿ ಸುಭಾಷ್ ಚಂದ್ರ ಬೋಸ್ ವಸತಿ ಶಾಲೆ, ಕಸ್ತೂರ ಬಾ ಗಾಂಧಿ ಬಾಲಿಕಾ ವಸತಿ ನಿಲಯ, ಕರ್ನಾಟಕ ಕಸ್ತೂರ ಬಾ ಗಾಂಧಿ ವಸತಿ ಶಾಲೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳ ವಸತಿ ನಿಲಯಗಳಲ್ಲಿ ದಾಖಲಾತಿಗೆ ಅವಕಾಶ ಕಲ್ಪಿಸಲಾಗುತ್ತಿದೆ. |
| (ಉ) | ರಾಜ್ಯದಲ್ಲಿ ಸಮಗ್ರ ಶಿಕ್ಷಣ ಯೋಜನೆ ಅನುಷ್ಠಾನದ ಯಶಸ್ಸಿನ ಬಗ್ಗೆ ರಾಜ್ಯ ಅಥವಾ ಕೇಂದ್ರ ಸರ್ಕಾರವಾಗಲಿ ಸಮೀಕ್ಷೆ ಕೈಗೊಂಡಿದೆಯೇ; ಹಾಗಿದ್ದಲ್ಲಿ ಸಮೀಕ್ಷೆಯ ಮುಖ್ಯ ಸಾರಾಂಶಗಳು ಯಾವುವು? (ಪೂರ್ಣ ವಿವರ ನೀಡುವುದು) | ಸಮಗ್ರ ಶಿಕ್ಷಣ ಯೋಜನೆಯ ಅನುಷ್ಠಾನ ಕುರಿತು Evaluation of the effectiveness of Key activities implemented Under the Scheme 'Samagra Shikshana Karnataka' from 2018-19 to 2020-2021 ಎಂಬ ಸಮೀಕ್ಷೆಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕೈಗೊಂಡಿದೆ. ಪ್ರಸ್ತುತ ಕ್ಷೇತ್ರ ಭೇಟಿ ಹಾಗೂ ಮಾಹಿತಿ ಸಂಗ್ರಹಣೆ ಕಾರ್ಯ ಪ್ರಗತಿಯಲ್ಲಿದೆ. |

**ಇಪಿ: 110 ಯೋಸಕ 2023**

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**